**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.28/2013</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಸಿ. ಕುಮಾರ್ | ಫ್ರಾಸಾ -9 |
| ತಂದೆಯ ಹೆಸರು | : ಚೆಲುವರಾಜ್ | ಚಾಸಾ-7 |
| ವಯಸ್ಸು | : 49 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪ್ರೆಸ್ | ದಿನಾಂಕಃ27.09.2024 |
| ವಾಸಸ್ಥಳ | : ಸುಣ್ಣದಕೇರಿ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

4 ನೇ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-6 ರವರ ಪರಿಚಯವೂ ಸಹಾ ನನಗಿಲ್ಲ.

ಸಾಕ್ಷಿಯು ದಿ.06.12.2011 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ಮೈಸೂರಿನ ರಾಮಕೃಷ್ಣ ಮಾರ್ಕೇಟ್ ನಲ್ಲಿ ಪಡೆದುಕೊಂಡ ಸಹಿ ಎಂದು ಗುರುತಿಸುತ್ತಾರೆ. ಯಾವ ವಿಚಾರಕ್ಕೆ ನನ್ನ ಸಹಿಯನ್ನು ಪಡೆಯಲಾಗಿದೆ ಹಾಗೂ ಆ ಮಹಜರ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಮಹಜರ್ ನ್ನು ನಿಪಿ-24, ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

ದಿ.06.12.2011 ರಂದು ಈ ಪ್ರರಕಣದ 3 ನೇ ಆರೋಪಿ ಮೈಸೂರಿನ ದೇವರಾಜ್ ಮೊಹಲ್ಲಾದ ಮಹಾವೀರ ಬ್ಯಾಂಕರ್ಸ ಅಂಗಡಿಯಲ್ಲಿ ಇದ್ದ 45 ಗ್ರಾಂ ಎರಡು ಚಿನ್ನದ ಸರಗಳು, 8 ಗ್ರಾಂ ಎರಡು ಚಿನ್ನದ ಓಲೆ, 36 ಗ್ರಾಂ ನ 6 ಜೊತೆ ಚಿನ್ನದ ಕಿವಿ ಓಲೆ, 4 ಜೊತೆ ಬೆಳ್ಳಿ ಕಾಲು ಚೈನು, ಎರಡು ಜೊತೆ ಬೆಳ್ಳಿ ಕಾಲುಂಗುರ ಕೊಟ್ಟಿರುವುದಾಗಿ ತೋರಿಸಿದ್ದು ಆ ವಸ್ತುಗಳನ್ನು ಪೋಲಿಸರು ನನ್ನ ಸಮಕ್ಷಮ ವಶಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ತಲೆಮರೆಸಿಕೊಂಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ**.,** ಮೂಡಿಗೆರೆ.